ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ ನ್ಯಾಯಾಲಯ, ಮದ್ದೂರು.

ಸಿಸಿ **352 /2024**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ನಾಗಮ್ಮ | **ಚಾ.ಸಾ.-1** |
| ತಂದೆಯ/ಗಂಡನ ಹೆಸರು | - | ಕೃಷ್ಣ | **ಫ್ರಾ.ಸಾ.-1** |
| ವಯಸ್ಸು | - | 55 ವರ್ಷ | |
| ಉದ್ಯೋಗ | - | ಗೃಹಿಣಿ | |
| ವಾಸಸ್ಥಳಃ | - | ಅರುವನಹಳ್ಳಿ | |

ದಿನಾಂಕಃ 15-07-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಅಭಿಯೋಜನೆಯ ಪರಃ ಮಾನ್ಯ ವಿಶೇಷ ಎ ಪಿ ಪಿ ರವರಿಂದಃ

ಚಾ.ಸಾ. 2 ನನ್ನ ಮಗ, ಚಾ.ಸಾ. 3 ನನ್ನ ಗಂಡ,. ಚಾ.ಸಾ. 4 ರಿಂದ 8 ರವರ ಪರಿಚಯವಿರುತ್ತದೆ. ಅವರು ನಮ್ಮ ಗ್ರಾಮಸ್ಥರು, ಆರೋಪಿತರ ಪರಿಚಯ ಇದೆ.

ದಿಃ 22-01-2024 ರಂದು ಸರ್ವೆಯರ್ ರವರು ಸರ್ವೆಗೆ ಬಂದಂತಹ ಸಮಯದಲ್ಲಿ ಆಗ ಆರೋಪಿ-3 ಮತ್ತು 4 ರವರು ಸರ್ವೆ ಮಾಡಲು ಬಿಡದೇ ಗಲಾಟೆ ಮಾಡಿರುತ್ತಾರೆ, ಅವಾಚ್ಯ ಶಬ್ಧಗಳಿಂದ ಬೈದಿರುತ್ತಾರೆ ನನ್ನ ಬಟ್ಟೆಯನ್ನು ಹಿಡಿದು ಎಳೆದಾಡಿರುತ್ತಾರೆ. ನಂತರ ಗ್ರಾಮಸ್ಥರು ಗಲಾಟೆಯನ್ನು ಬಿಡಿಸಿ ಕಳುಹಿಸಿರುತ್ತಾರೆ. ಪುನಃ ಸರ್ವೆಯರ್ 1 ಗಂಟೆ ನಂತರ ಬಿಟ್ಟು ಬಂದು ಸರ್ವೆ ಕೆಲಸ ಮಾಡಿರುತ್ತಾರೆ. ಆರೋಪಿತರು ಸರ್ವೆಯರ್ ಸರ್ವೆ ಮಾಡಿ ಹೋದ ನಂತರದಲ್ಲೂ ಸಹ ನಮ್ಮನ್ನು ಉದ್ದೇಶಿಸಿ ಅವಾಚ್ಯ ಶಬ್ಧಗಳಿಂದ ಬೈದಿರುತ್ತಾರೆ. ನಂತರ ದಿಃ 24-01-2024 ರಂದು ನನ್ನ ಗಂಡ ಚಾಸಾ-3 ರವರು ಜಮೀನಿನ ಬಳಿ ಹೋಗಿ ಆರೋಪಿತರ ಮನೆಯ ಮುಂದೆ ಬರುವಂತಹ ಸಮಯದಲ್ಲಿ ಆರೋಪಿತರು ಅವರ ಬೈಕ್ ನ್ನು ಅಡ್ಡಗಟ್ಟಿ ಅವರನ್ನು ಅವಾಚ್ಯ ಶಬ್ಧಗಳಿಂದ ಬೈದಿರುತ್ತಾರೆ. ನಂತರ ಗ್ರಾಮಸ್ಥರು ಗಲಾಟೆಯನ್ನು ಬಿಡಿಸಿ ಕಳುಹಿಸಿರುತ್ತಾರೆ. ನಂತರ ನಾನು ದಿಃ 24-01-2024 ರಂದು ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ, ಸದರೀ ದಾಖಲೆ ದೂರಾಗಿದ್ದು, ಅದನ್ನು ನಿ.ಪಿ. 1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ. 1 ಎ ಎಂದು ಗುರುತಿಸಲಾಯಿತು. ನಂತರ ಪೊಲೀಸರು ನಾನು ತೋರಿಸಿದ ಸ್ಥಳದಲ್ಲಿ ಸಂಜೆ 04-00 ರಿಂದ 04-30 ರವರೆಗೆ ಮಹಜರ್ ಕ್ರಮ ಜರುಗಿಸಿರುತ್ತಾರೆ. ಆ ಸಮಯದಲ್ಲಿ ಚಾಸಾ-7 ಮತ್ತು 8 ರವರು ಹಾಜರಿದ್ದರು. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ, ಸದರೀ ದಾಖಲೆ ಮಹಜರ್ ಆಗಿದ್ದು, ಅದನ್ನು ನಿ.ಪಿ. 2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.2 ಎ ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದೆಯಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**( ಈ ಹಂತದಲ್ಲಿ ಮಾನ್ಯ ವಿಶೇಷ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿ ನೀಡಲಾಯಿತು. )**

ಪಾಟೀ ಸವಾಲುಃ ಮಾನ್ಯ ವಿಶೇಷ ಎ ಪಿ ಪಿ ರವರಿಂದ

ದಿಃ 20-01-2024 ರಂದು ಸರ್ವೆಯರ್ ಸರ್ವೆಗೆ ಬಂದಿದ್ದು ಆ ದಿನ ಗಲಾಟೆಯಾಗಿರುತ್ತದೆ ಎಂದರೆ ಸರಿ. ನಂತರ ದಿಃ 22-01-2024 ರಂದು ಆರೋಪಿತರು ನನ್ನ ಗಂಡ ಚಾಸಾ-3 ರವರೊಂದಿಗೆ ಗಲಾಟೆ ಮಾಡಿರುತ್ತಾರೆ ಎಂದರೆ ಸರಿ. ಆರೋಪಿತರು ನನ್ನ ಗಂಡ ಚಾಸಾ-3 ರವರಿಗೆ ಕೈಯಿಂದ ಹಲ್ಲೆ ಮಾಡಿರುತ್ತಾರೆಂದರೆ ಸರಿ. ನಿಪಿ-2 ಮಹಜರ್ ನ್ನು ದಿಃ 26-01-2024 ರಂದು ಮಧ್ಯಾಹ್ನ 03-30 ರಿಂದ ಸಂಜೆ 04-20 ಗಂಟೆವರೆಗೆ ಜರುಗಿಸಿರುತ್ತಾರೆ ಎಂದರೆ ಸರಿ.

ಪಾಟೀ ಸವಾಲು ಆರೋಪಿತರ ಪರ ಶ್ರೀ ಎಂ ಸಿ ಎ ವಕೀಲರಿಂದ

ನಿಪಿ-1 ದೂರಿನಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿರುತ್ತದೆ. ನಾನು ಎಸ್ ಎಸ್ ಎಲ್ ಸಿ ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನಿಪಿ-1 ದೂರನ್ನು ಪೊಲೀಸ್ ಠಾಣೆಯಲ್ಲಿ ಟೈಪ್ ಮಾಡಿಸಿರುತ್ತೇನೆ. ನಾನು ಆರೋಪಿತರ ವಿರುದ್ಧ ದೂರನ್ನು ಕೊಡಲು ಹೋದಾಗ ಪೊಲೀಸರು ಪ್ರಕರಣವನ್ನು ರಾಜೀ ಮಾಡಿಸುತ್ತೇವೆಂದು ಹೇಳಿರುತ್ತಾರೆ. ಚಾಸಾ-4 ರಿಂದ 8 ರವರು ನಮ್ಮ ಸಂಬಂಧಿಕರಲ್ಲ. ನಮ್ಮ ಊರಿನ ಗ್ರಾಮಸ್ಥರು. ಆರೋಪಿತರು ನಮ್ಮ ಜಮೀನಿನ ಉತ್ತರ ದಿಕ್ಕಿನ ಬಾಜುದಾರರು ಎಂದರೆ ಸರಿ. ನಮಗೂ ಮತ್ತು ಆರೋಪಿತರ ನಡುವೆ ಜಮೀನಿನ ಅಳತೆ ವಿಚಾರದಲ್ಲಿ ಮನಸ್ತಾಪವಿದೆ ಎಂದರೆ ಸರಿ.

ದಿಃ 20-01-2024 ರಂದು ಮಧ್ಯಾಹ್ನ 12-30 ರಿಂದ 01-00 ಗಂಟೆವರೆಗೆ ಜಮೀನಿನ ಅಳತೆ ಕಾರ್ಯವನ್ನು ಮಾಡಿರುತ್ತಾರೆ. ಆ ಸಮಯದಲ್ಲಿ 2 ಮತ್ತು 4 ನೇ ಆರೋಪಿತರು ಇದ್ದರು. ದಿಃ 20-01-2024 ರಂದು ನನ್ನ ಗಂಡ ಚಾಸಾ-3 ಹಾಗೂ ನನ್ನ ಮಗ ಚಾಸಾ-2 ರವರು ಇದ್ದರು ಎಂದರೆ ಸಾಕ್ಷಿಯು ನನ್ನ ಗಂಡ ಚಾಸಾ-3 ರವರು ಇರಲಿಲ್ಲ. ಆ ದಿನ ನಾವೇ ಆರೋಪಿತರಿಗೆ ಹಲ್ಲೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ವಿರುದ್ಧ ನೀಡಿರುವ ದೂರಿನ ಪ್ರಕರಣವೂ ವಿಚಾರಣೆಗೆ ಬಾಕಿಯಿರುತ್ತದೆ ಎಂದರೆ ಸರಿ.

ದಿಃ 20-01-2024 ರಂದು ನಮ್ಮ ಮತ್ತು ಆರೋಪಿತರ ನಡುವೆ ಯಾವಾ ಗಲಾಟೆ ಆಗದೇ ಹೋದರೂ ಸಹ ನಾನು ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ದಿಃ22-01-2024 ರಂದು ಆರೋಪಿತರು ನನ್ನ ಗಂಡ ಚಾಸಾ-3 ರವರ ಮೇಲೆ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಮತ್ತು ಆ ಸಮಯದಲ್ಲಿ ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಎಂದರೆ ಸರಿಯಲ್ಲ. ಯಾವುದೇ ಕೊಲೆ ಬೆದರಿಕೆ ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಸಂಗತಿಯೂ ಸೃಷ್ಟಿಸಿದ ಸಂಗತಿ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ಆರೋಪಿತರ ವಿರುದ್ಧ ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ ಮತ್ತು ನಿಪಿ-2 ರ ಮಹಜರ್ ಗೆ ಚಾಸಾ-7 ಮತ್ತು 8 ರವರು ಸಹಿ ಮಾಡಿರುತ್ತಾರೆ. ನಿಪಿ-2 ಮಹಜರ್ ನಲ್ಲಿ ಬರೆದಿರುವ ವಿಚಾರಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ಪೊಲೀಸರು ಘಟನಾ ಸ್ಥಳಕ್ಕೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-2 ಮಹಜರ್ ನ್ನು ಪೊಲೀಸ್ ಠಾಣೆಯಲ್ಲಿ ಬರವಣಿಗೆ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸರಿಯಾಗಿದೆಯೆಂದು ಒಪ್ಪಿರುತ್ತಾರೆ.

2 ನೇ ಅಪರ ಸಿವಿಲ್ ನ್ಯಾಯಾಧೀಶರು

ಸಾಕ್ಷಿ ಸಹಿ

ಮತ್ತು ಜೆ ಎಂ ಎಫ್ ಸಿ , ಮದ್ದೂರು.